# ಧರ್ಮಸಂಸತ್‌ನ ಪ್ರತಿಕೃತಿ

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದಲ್ಲಿ 12ನೇ ಶತಮಾನದಲ್ಲಿದ್ದ ಅನುಭವ ಮಂಟಪದ ಪ್ರತಿಕೃತಿಯನ್ನು ನಿರ್ಮಿಸಲಾಗಿದೆ. ಅಲ್ಲಮ ಪ್ರಭುಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಧರ್ಮಸಂಸತ್‌ನಲ್ಲಿ ಎಲ್ಲಾ ಬಸವಾದಿ ಶರಣರು, ಶರಣೆಯರು ಭಾಗವಹಿಸಿದ ದೃಶ್ಯವನ್ನು ಯಥಾವತ್ ಚಿತ್ರಿಸಲಾಗಿದೆ. ಇದು ಚಿತ್ರದುರ್ಗದ ಮುರುಘ ಮಠದ ಬಳಿಯಲ್ಲಿದೆ.

**–ಡಾ.ಕೆ.ವಿ.ಸಂತೋಷ್ ಹೊಳಲ್ಕೆರೆ, ಚಿತ್ರದುರ್ಗ**





# ವರಾಹ ದೇವಸ್ಥಾನ

ಮಹಾರಾಷ್ಟ್ರದ ನಾಗಪುರದ ಹತ್ತಿರ ಇರುವ ರಾಮಟೆಕ್ ಎಂಬಲ್ಲಿ ವಿಷ್ಣುವಿನ ಮೂರನೆಯ ಅವತಾರವಾದ ವರಾಹನ ದೊಡ್ಡ ಶಿಲಾಮೂರ್ತಿಯನ್ನು ನಿಲ್ಲಿಸಿ ಅಪರೂಪದ ದೇವಾಲಯವನ್ನು ನಿರ್ಮಿಸಿದ್ದಾರೆ. ಈ ಬೆಟ್ಟದ ಮೇಲೆ ಅಗಸ್ತ್ಯಮುನಿ ವಾಸವಾಗಿದ್ದನೆಂಬ ಪ್ರತೀತಿ ಇದೆ.

**–ಗಂಗಾ ಆರ್.ಭಟ್ಟ, ಬೆಳಗಾವಿ**

# ಸಕ್ಕರೆ ಪಾಕದಲ್ಲೂ ಅರಳಿದ ಕಲೆ

ಈ ಚಿತ್ರದಲ್ಲಿರುವ ಪ್ಲೇಟ್‌ನಲ್ಲಿ ಚಹ ಕುಡಿಯಲು ಬಳಸುವ ಕಪ್ಪು– ಬಸಿ, ಬಾಳೆ ಎಲೆ, ಅನ್ನ ಹಾಗೂ ಕೊಬ್ಬರಿ ಬಟ್ಟಲು, ಸಣ್ಣ ಸಣ್ಣ ಬಟ್ಟಲುಗಳಿವೆ. ಆದರೆ ಇವುಗಳು ಬಳಸಲು ಬಾರದವು. ನೋಡಿ ಖುಷಿ ಪಡಬೇಕಷ್ಟೆ. ಇವುಗಳನ್ನು ಸಕ್ಕರೆ ಪಾಕದಿಂದ ಮಾಡಿದ್ದು. ಅಚ್ಚುಗಳಲ್ಲಿ ಸಕ್ಕರೆ ಪಾಕವನ್ನು ಹಾಕಿದರೆ ಅರ್ಧ ಗಂಟೆಯಲ್ಲಿ ಈ ರೀತಿಯ ವಸ್ತುಗಳು ಮೂಡಿಬರುತ್ತವೆ.

**–ಜಗದೀಶ ಎಂ.ಸಂಗಣ್ಣವರ, ಬೆಳಗಾವಿ**

